**II Semester 3 Year LL.B./VI Semester 5 Year B.A. LL.B. (Maj.-Min. System)/ B.B.A. LL.B./B.Com. LL.B. Examination, October/November 2022 (June 2022)**

# FAMILY LAW – II
## (Mohammadan Law and Indian Succession Act)

Duration : 3 Hours Max. Marks : 80

**Instructions : 1. Answer all five Units.**

**2. One essay type question and short note/problem is compulsory from each Unit.**

**3. Figures to the right indicate marks.**

**4. Answers should be written either in English or in Kannada completely.**

**ಸೂಚನೆಗಳು : 1. ಎಲ್ಲಾ ಐದು ಘಟಕಗಳಿಗೂ ಉತ್ತರಿಸಿ.**

**2. ಪ್ರತಿ ಘಟಕದಿಂದ ಒಂದು ಪ್ರಬಂಧಾತ್ಮಕ ಪ್ರಶ್ನೆ ಹಾಗೂ ಒಂದು ಲಘು ಟಿಪ್ಪಣಿ/ಸಮಸ್ಯೆಗೆ ಉತ್ತರಿಸುವುದು ಕಡ್ಡಾಯ.**

**3. ಪ್ರಶ್ನೆಯ ಬಲಬದಿಯಲ್ಲಿ ಅಂಕಗಳು ಸೂಚಿತವಾಗಿವೆ.**

**4. ಉತ್ತರಗಳನ್ನು ಪೂರ್ಣವಾಗಿ ಆಂಗ್ಲ ಭಾಷೆಯಲ್ಲಿ ಅಥವಾ ಕನ್ನಡ ಭಾಷೆಯಲ್ಲಿ ಬರೆಯಬೇಕು.**

### UNIT – I
### ಘಟಕ – I

Q. No. 1. (a) Explain various primary sources of Mohammadan law. Marks : 10

ಮಹಮ್ಮದೀಯ ಕಾನೂನಿನ ವಿವಿಧ ಪ್ರಾಥಮಿಕ ಮೂಲಗಳನ್ನು ವಿವರಿಸಿ.

OR/ಅಥವಾ

Discuss the rights and remedies available to a muslim wife on non-payment of dower. Marks : 10

ಕನ್ಯಾಶುಲ್ಕವು ಸಂದಾಯವಾಗದಿದ್ದಾಗ ಮುಸ್ಲಿಂ ಪತ್ನಿಯೊಬ್ಬಳಿಗೆ ದೊರಕುವ ಹಕ್ಕುಗಳು ಹಾಗೂ ಪರಿಹಾರೋಪಾಯಗಳನ್ನು ಚರ್ಚಿಸಿ.

(b) Write a note on muta marriage. Marks : 6

ಮುತಾ ವಿವಾಹದ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Write a note on effect of conversion to Islam on marital rights. Marks : 6

ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದುದರಿಂದಾಗಿ ವೈವಾಹಿಕ ಹಕ್ಕುಗಳ ಮೇಲಾಗುವ ಪರಿಣಾಮಗಳ ಬಗ್ಗೆ ಟಿಪ್ಪಣಿಯನ್ನು ಬರೆಯಿರಿ.

UNIT – II
ಘಟಕ – II

Q. No. 2. (a) Who is a guardian ? Explain the guardianship of person of a minor under muslim law. Marks : 10
ಸಂರಕ್ಷಕ ಎಂದರೆ ಯಾರು ? ಮುಸ್ಲಿಂ ಕಾನೂನಿನಲ್ಲಿ ಅಪ್ರಾಪ್ತವಯಸ್ಕನ ಲಾಲನೆ ಪಾಲನೆಗೆ ಸಂಬಂಧಿಸಿದ ಸಂರಕ್ಷಕತ್ವದ ಬಗ್ಗೆ ವಿವರಿಸಿ.

OR/ಅಥವಾ

Discuss the grounds for dissolution of marriage under Indian Divorce Act. Marks : 10
ಭಾರತೀಯ ವಿಚ್ಛೇದನಾ ಅಧಿನಿಯಮದಲ್ಲಿ ವಿವಾಹ ವಿಘಟನೆಗೆ ಇರುವ ಆಧಾರಗಳನ್ನು ಚರ್ಚಿಸಿರಿ.

(b) Fathima and Rashid have executed a nikahnama in the presence of Moulvi on 3rd January 2013. On 15th May 2013 Fathima gave birth to Anisha. Ever since the birth of Anisha Rashid reared that child with great love and affection. Is Anisha a legitimate daughter ? Marks : 6
ಫಾತಿಮಾ ಹಾಗೂ ರಶೀದ್ ದಿನಾಂಕ 3-1-2013 ರಂದು ತಮ್ಮ ನಿಕಾನಾಮವನ್ನು ಮೌಲ್ವಿಯ ಸಮಕ್ಷಮ ಜಾರಿಗೊಳಿಸಿದರು. ದಿನಾಂಕ 15-5-2013 ರಂದು ಫಾತಿಮಾಳು ಅನಿಷಾಳಿಗೆ ಜನ್ಮ ನೀಡಿದಳು. ಅನಿಷಾಳು ಜನಿಸಿದಂದಿನಿಂದ ರಶೀದ್ ಸಕಲ ಪ್ರೀತಿ ಹಾಗೂ ವಾತ್ಸಲ್ಯಗಳಿಂದ ಆಕೆಯನ್ನು ಪೋಷಿಸಿದನು. ಅನಿಷಾಳು ಔರಸ ಮಗುವೇ ?

OR/ಅಥವಾ

Salim divorced his wife Salma on 1st January 2019. Presently she needs maintenance. Advise her. Marks : 6
ಸಲೀಮನು ತನ್ನ ಪತ್ನಿ ಸಲ್ಮಾಳನ್ನು 1-1-2019 ರಂದು ವಿಚ್ಛೇದಿಸಿದ್ದಾನೆ. ಈಗ ಅವಳಿಗೆ ಜೀವನಾಂಶದ ಅಗತ್ಯವಿದೆ. ಅವಳಿಗೆ ಸಲಹೆ ನೀಡಿ.

UNIT – III
ಘಟಕ – III

Q. No. 3. (a) Define 'Hiba' under muslim law. What are the essentials of a valid gift ? Marks : 10
ಮುಸ್ಲಿಂ ಕಾನೂನಿನಲ್ಲಿ "ಹಿಬಾ"ವನ್ನು ಪರಿಭಾಷಿಸಿ. ಒಂದು ಸಕ್ರಮ ದಾನದ ಅಗತ್ಯಾಂಶಗಳು ಯಾವುವು ?

OR/ಅಥವಾ

What is pre-emption ? Who can claim it ? Explain the formalities to be observed for the assertion of the right of pre-emption. Marks : 10
ಪೂರ್ವಕ್ರಯಾಧಿಕಾರ ಎಂದರೇನು ? ಯಾರು ಈ ಅಧಿಕಾರವನ್ನು ಚಲಾಯಿಸಬಹುದು ? ಪೂರ್ವಕ್ರಯಾಧಿಕಾರವನ್ನು ಚಲಾಯಿಸುವಾಗ ಅನುಸರಿಸಬೇಕಾದ ಔಪಚಾರಿಕ ನಿಯಮಗಳನ್ನು ವಿವರಿಸಿ.

(b) Write a short note on Mutawalli. Marks : 6
''ಮುತಾವಲಿಯ'' ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Bequeathable third. Marks : 6
ಮರಣಶಾಸನದಾನಾರ್ಹ ತ್ರಯಾಂಶ.

UNIT – IV
ಘಟಕ - IV

Q. No. 4. (a) Explain the provisions of Indian Succession Act relating to intestate succession applicable to non-Parsis. Marks : 10
ಪಾರ್ಸಿಗಳಲ್ಲದವರು ಉಯಿಲು ಮಾಡದೇ ಸತ್ತಾಗ ಅನ್ವಯಿಸುವ ಉತ್ತರಾಧಿಕಾರದ ನಿಯಮಗಳನ್ನು ಭಾರತೀಯ ಉತ್ತರಾಧಿಕಾರ ಅಧಿನಿಯಮದಲ್ಲಿ ಪ್ರಣೀತವಾಗಿರುವಂತೆ ವಿವರಿಸಿ.

OR/ಅಥವಾ

Explain the powers and duties of executor. Marks : 10
ಕಾರ್ಯನಿರ್ವಾಹಕನ ಅಧಿಕಾರ ಹಾಗೂ ಬಾಧ್ಯತೆಗಳನ್ನು ವಿವರಿಸಿ.

(b) Sathish having domicile in India dies in Italy leaving movable property in England and immovable properties in France. State the law by which succession to his property is regulated. Marks : 6
ಭಾರತದಲ್ಲಿ ಅಧಿವಾಸ ಹೊಂದಿದ ಸತೀಶನು ಇಂಗ್ಲೆಂಡಿನಲ್ಲಿ ಚರಾಸ್ತಿಯನ್ನು ಹಾಗೂ ಫ್ರಾನ್ಸಿನಲ್ಲಿ ಸ್ಥಿರಾಸ್ತಿಯನ್ನು ಬಿಟ್ಟು ಇಟಲಿಯಲ್ಲಿ ಮರಣಿಸುತ್ತಾನೆ. ಯಾವ ಕಾನೂನಿನ ಅನ್ವಯ ಅವನ ಆಸ್ತಿಯ ವಾರಸುತನ ನಿರ್ಧರಿತವಾಗುತ್ತದೆ ಎಂಬುದನ್ನು ತಿಳಿಸಿ.

OR/ಅಥವಾ

A Sunni woman dies leaving behind her husband, mother, one son and one daughter. Assign their shares. Marks : 6
ಒಬ್ಬ ಸುನ್ನಿ ಸ್ತ್ರೀಯು ತನ್ನ ಪತಿ, ತಾಯಿ, ಒಬ್ಬ ಮಗ ಹಾಗೂ ಒಬ್ಬಳು ಮಗಳನ್ನು ಬಿಟ್ಟು ಮರಣಿಸುತ್ತಾಳೆ. ಅವರ ಪಾಲುಗಳನ್ನು ಹಂಚಿರಿ.

UNIT – V
ಘಟಕ – V

Q. No. 5. (a) State the rules for the execution of unpriviled will. Marks : 10
ವಿಶೇಷ ಅಧಿಕಾರವಿಲ್ಲದ ಮರಣಶಾಸನ ಮಾಡಲು ಅನುಸರಿಸಬೇಕಾದ ನಿಯಮಗಳನ್ನು ತಿಳಿಸಿ.

OR/ಅಥವಾ

Discuss the circumstances which render a bequest void. Marks : 10
ಮರಣಶಾಸನದಾನವೊಂದು ಶೂನ್ಯಗೊಳ್ಳುವ ಸಂದರ್ಭಗಳನ್ನು ಚರ್ಚಿಸಿ.

(b) Write a short note on need for Uniform Civil Code. Marks : 6

ಏಕರೂಪಿ ನಾಗರಿಕ ಸಂಹಿತೆಯ ಅಗತ್ಯದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Raman, a christian fell in love with Reshma and bequeathed his whole property to Reshma. Later he married Reshma. After 6 months of his marriage Raman died in an accident. Now parents of Raman are claiming their shares in the property of Raman. But Reshma contends that she must get the property of Raman under his will. Advise Reshma. Marks : 6

ರಾಮನ್ ಎಂಬ ಕ್ರೈಸ್ತ ಮತೀಯನು ರೇಷ್ಮಾಳನ್ನು ಪ್ರೀತಿಸಿ ತನ್ನ ಸಮಸ್ತ ಆಸ್ತಿಯನ್ನು ಆಕೆಗೆ ನೀಡಲು ಮರಣಶಾಸನದಾನವೊಂದನ್ನು ಮಾಡಿ, ತದ ನಂತರ ಆಕೆಯನ್ನು ವಿವಾಹವಾಗುತ್ತಾನೆ. ವಿವಾಹವಾದ 6 ತಿಂಗಳ ನಂತರ ಆತನು ಅಪಘಾತದಲ್ಲಿ ಮರಣಿಸುತ್ತಾನೆ. ಈಗ ರಾಮನ್‌ನ ಹೆತ್ತವರು ಆತನ ಆಸ್ತಿಯಲ್ಲಿ ತಮಗೆ ಪಾಲು ಸಿಗಬೇಕೆಂದು ಹಕ್ಕುದಾರಿಕೆ ಮಂಡಿಸುತ್ತಾರೆ. ಆದರೆ ರೇಷ್ಮಾಳು ರಾಮನ್‌ನ ಮರಣಶಾಸನ ಪತ್ರದ ಪ್ರಕಾರ ತಾನೇ ಆತನ ಸಮಸ್ತ ಆಸ್ತಿಗೆ ಹಕ್ಕು ಧಾರಿಣಿ ಎಂದು ವಾದಿಸುತ್ತಾಳೆ. ರೇಷ್ಮಾಳಿಗೆ ಸಲಹೆ ನೀಡಿ.

---